**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆಃ 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | **ವಿ.ಚಂದ್ರಶೇಖರ್** | **ಪಿಡಬ್ಲ್ಯೂ.02** |
| **ತಂದೆಯ ಹೆಸರು** | ಃ | **ಎಸ್.ವೆಂಕಟಾಚಾರ್** | **ಸಿಡಬ್ಲ್ಯೂ.04** |
| **ವಯಸ್ಸು** | ಃ | **39 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | ಃ | **ಚಿನ್ನ ಬೆಳ್ಳಿ ಕೆಲಸ** | **ದಿನಾಂಕಃ 17.10.2017** |
| **ವಾಸಸ್ಥಳ** | ಃ | **ಚಿತ್ರದುರ್ಗ** | |

**ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ**

ಆರೋಪಿತರು ನನಗೆ ಗೊತ್ತಿರುತ್ತಾರೆ. ಪಿಡಬ್ಲ್ಯೂ-1 ನರಸಿಂಹಪ್ಪ ನನಗೆ ಗೊತ್ತು. ದಿಃ 04.06.2014 ರಂದು ಲೋ.ಪೊಲೀಸರು ಕರೆದ ಪ್ರಕಾರ ನಾನು ಚಿತ್ರದುರ್ಗ ಪಟ್ಟಣದ ಆರೋಪಿ-1 ರಾಜಣ್ಣ ಇವರ ಮನೆಗೆ ಹೋಗಿದ್ದೆನು. ಅಂದು ಲೋ.ಪೊಲೀಸರು ಆರೋಪಿ-1, 2 ಇವರ ಮನೆಯಲ್ಲಿ ರೇಡ್ ಮಾಡಿ ಬೆಳ್ಳಿ, ಬಂಗಾರ ಪತ್ತೆ ಹಚ್ಚಿದ್ದರು. ಆ ಸಮಯದಲ್ಲಿ ನಾನು ಆರೋಪಿತರ ಮನೆಯಲ್ಲಿ ಅಲ್ಲಿ ದೊರೆತಂತಹ ಬೆಳ್ಳಿ, ಬಂಗಾರ ವಸ್ತುಗಳನ್ನು ನೋಡಿ ಪರೀಕ್ಷಿಸಿ, ತೂಕ ಮಾಡಿ, ಅವುಗಳ ಬೆಲೆಯನ್ನು ಕಂಡುಕೊಂಡು ಪಂಚರ ಸಮಕ್ಷಮ ಹೇಳಿದ್ದೇನೆ. ಆರೋಪಿತರ ಮನೆಯಲ್ಲಿ ದೊರೆತಂತಹ ಬಂಗಾರದ ವಸ್ತುಗಳನ್ನು ನಿಪಿ-2 ಮಹಜರ್‌ನಲ್ಲಿ ಕ್ರ.ಸಂ.187 ರಿಂದ 200 ಅಂತ ಬರೆಯಲಾಗಿದೆ. ಆ ವಸ್ತುಗಳ ಮುಂದೆ ಬಂಗಾರದ ಐಟಂ ತೂಕ, ಬೆಲೆ ಬರೆಯಲಾಗಿದೆ. ಅದೇ ರೀತಿ ನಿಪಿ-2 ಮಹಜರ್‌ನಲ್ಲಿ ಆರೋಪಿತರ ಮನೆಯಲ್ಲಿ ದೊರೆತಂತಹ ಬೆಳ್ಳಿಯ ವಸ್ತುಗಳ ವಿವರ, ತೂಕ ಬೆಲೆಯನ್ನು ಕ್ರ.ಸಂ.201 ರಿಂದ 214 ರವರೆಗೆ ಬರೆಯಲಾಗಿದೆ.

2. ಈಗ ತೋರಿಸಿದ ನಿಪಿ-2 ಮಹಜರ್ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಸದರಿ ಬೆಳ್ಳಿ ಬಂಗಾರದ ವಸ್ತುಗಳನ್ನು ನಿಪಿ-2 ಮಹಜರ್

ಮಾಡಿದ ನಂತರ ಲೋ.ಪೋಲೀಸರು ಅವುಗಳನ್ನು ಆರೋಪಿ-1 ರಾಜಣ್ಣನ ವಶಕ್ಕೆ ಕೊಟ್ಟಿರುತ್ತಾರೆ. ಅಂದು ಮನೆಯಲ್ಲಿ ಇದ್ದಂತಹ ಆರೋಪಿ-1 ರಾಜಣ್ಣನನ್ನು ನೋಡಿದರೆ ಗುರುತಿಸುತ್ತೇನೆ ಅಂತ ಸಾಕ್ಷಿಯು ಗುರುತಿಸಿ ತೋರಿಸಿರುತ್ತಾರೆ.

**ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

3. ಅಂದು ಆರೋಪಿತರ ಮನೆಗೆ ನಾನು ಬೆಳ್ಳಿ, ಬಂಗಾರ ಚೆಕ್ ಮಾಡಲು ಹೋಗುವ ಕಾಲಕ್ಕೆ ಒರೆಗಲ್ಲು, ಆಸಿಡ್, ತೂಕದ ಯಂತ್ರ ತೆಗೆದುಕೊಂಡು ಹೋಗಿದ್ದೆನು. ಅಂದು ಬಂಗಾರದ ವಸ್ತುಗಳನ್ನು ನಾನು ಒರೆಕಲ್ಲಿಗೆ ತಿಕ್ಕಿದ ನಂತರ ಕ್ವಾಲಿಟಿ ಚೆಕ್ ಮಾಡುವ ಲ್ಯಾಬ್‌ಗೆ ಕಳುಹಿಸಿರುವುದಿಲ್ಲ. ಅಂದು ನಾನು ಕ್ಯಾರೆಟ್ ಮೆಶಿನ್ ತೆಗೆದುಕೊಂಡು ಹೋಗಿರುವುದಿಲ್ಲ. ಅಂದು ಹಾಜರುಮಾಡಿದ ಬಂಗಾರಗಳಲ್ಲಿ ಎಷ್ಟು ಪ್ರಮಾಣ ಕಾಪರ್ ಇದೆ ಅಂತ ನಾನು ಕಂಡುಕೊಂಡಿದ್ದೆನು. ಸಾಮಾನ್ಯವಾಗಿ ಒರೆಗಲ್ಲಿಗೆ ಹಚ್ಚಿ ಆಸಿಡ್ ಟೆಸ್ಟ್ ಮಾಡಿದಾಗ ಬಂಗಾರ ಎಷ್ಟು ಪ್ರಮಾಣ ಇದೆ ಎಂದು ಅಂದಾಜು ಮೇರೆಗೆ ಹೇಳಬಹುದು.

4. ಅದೇ ರೀತಿ ನಿಖರವಾಗಿ ಬಂಗಾರ ಎಷ್ಟು ಪ್ರಮಾಣ ಇದೆ ಅಂತ ಕಂಡುಕೊಳ್ಳಲು ಕ್ವಾಲಿಟಿ ಚೆಕಿಂಗ್ ಲ್ಯಾಬ್‌ಗೆ ಕಳುಹಿಸಿದರೆ ಗೊತ್ತಾಗುತ್ತದೆ ಎನ್ನುವುದು ನಿಜ. ನಾನು ಚೆಕ್ ಮಾಡಿದ ಬಂಗಾರದ ವಸ್ತುಗಳಲ್ಲಿ ಎಷ್ಟು ಪ್ರಮಾಣ ಕಾಪರ್ ಮಿಕ್ಸ್ ಆಗಿದೆ ಅಂತ ನಿಪಿ-2 ಮಹಜರ್‌ನಲ್ಲಿ ಬರೆದಿಲ್ಲ. ಸಾಮಾನ್ಯವಾಗಿ ಬಂಗಾರದ ಐಟಂ ನೋಡಿದ ಕೂಡಲೇ ಅದು ಎಷ್ಟು ವರ್ಷ ಹಳೆಯದು ಅಂತ ಹೇಳಲು ಬರುವುದಿಲ್ಲ. ಏಕೆಂದರೆ ಬಂಗಾರ ಯಾವಾಗಲೂ ಒಂದೇ ರೀತಿ ಇರುತ್ತದೆ, ಅದಕ್ಕೆ ವಯಸ್ಸಾಗಿದ್ದು ಕಂಡು ಬರುವುದಿಲ್ಲ. ಅದರ ಬೆಲೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತದೆ. ಸಾಮಾನ್ಯವಾಗಿ ವ್ಯಕ್ತಿ ಹಳೆ ಬಂಗಾರದಲ್ಲಿ ಹೊಸ ವಿನ್ಯಾಸದ ವಸ್ತು, ಹೊಸ ಬಂಗಾರದ ಹಳೇ ಡಿಸೈನ್ (ವಿನ್ಯಾಸ)

ಐಟಂ ಮಾಡಿಸಬಹುದು ಎನ್ನುವುದು ನಿಜ. ಅಲ್ಲಿ ದೊರೆತಂತಹ ಬಂಗಾರದಲ್ಲಿ ಕೆಲವು ಐಟಂನಲ್ಲಿ ಮುತ್ತು, ಹವಳ ಇದ್ದವು ಎನ್ನುವುದು ನಿಜ. ಮುತ್ತು, ಹವಳಗಳ ಪ್ರತ್ಯೇಕ ತೂಕ, ಬೆಲೆಯನ್ನು ನಿಪಿ-2 ಮಹಜರ್‌ನಲ್ಲಿ ಬರೆದಿಲ್ಲ. ಅಂದು ಆರೋಪಿ-1 ರಾಜಣ್ಣ ನಮಗೆ ಈ ಬೆಳ್ಳಿ ಬಂಗಾರದ ವಸ್ತುಗಳು ಪ್ರಮೋಶನ್ ಆದಾಗ ಬಂದಿವೆ ಎಂದು ನಮ್ಮ ಮುಂದೆ ಹೇಳಿದ ಎಂದರೆ ಸರಿಯಲ್ಲ.

5. ಅಂದು ನಾನು ಬೆಳ್ಳಿ ಬಂಗಾರದ ವಸ್ತುಗಳ ಬೆಲೆ ಕಂಡುಕೊಳ್ಳಲು 2014 ರಲ್ಲಿ ಇದ್ದಂತಹ ತಲಾ 10 ಗ್ರಾಂನ ಬೆಲೆ ಹಿಡಿದುಕೊಂಡು ಲೆಕ್ಕಾಚಾರ ಹೇಳಿದ್ದೇನೆ. ನನಗೆ ಸ್ವಂತ ಬಂಗಾರದ ಅಂಗಡಿ ಇರುವುದಿಲ್ಲ. ನಾನು ಬೇರೆಯವರ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಬೆಳ್ಳಿ, ಬಂಗಾರ ಬೆಲೆ ಕಂಡು ಹಿಡಿಯಲು ಜ್ಞಾನ ಹೊಂದಿರುವುದಿಲ್ಲ ಎನ್ನುವುದು ಸುಳ್ಳು. ಲೋ.ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪರಿಣಿತನಾಗಿರುವುದಿಲ್ಲ ಎನ್ನುವುದು ಸುಳ್ಳು.

## ಮರು ವಿಚಾರಣೆಃ ಎಸ್‌ಪಿಪಿ ಯವರಿಂದಃ

ಬಂಗಾರದ ಆಭರಣದಲ್ಲಿ ಮುತ್ತು, ಹವಳ, ಹರಳು ಇದ್ದಾಗ ಅವು ಎಷ್ಟು ಇರುತ್ತವೆ, ಅವುಗಳ ಅಂದಾಜು ತೂಕ ಎಷ್ಟಾಗುತ್ತದೆ ಎಂದು ತಿಳಿದುಕೊಂಡು ಅಷ್ಟು ತೂಕ ಕಡಿಮೆ ಮಾಡಿ ಬಂಗಾರದ ತೂಕ ಬೆಲೆ ಕಂಡು ಕೊಳ್ಳುತ್ತೇವೆ. ಅದೇ ರೀತಿ ಈ ಕೇಸ್‌ನಲ್ಲಿ ಮುತ್ತು, ಹವಳ, ಹರಳು ಇರುವಂತಹ ಐಟಂಗಳಲ್ಲಿ ಅವುಗಳ ತೂಕ ಕಡಿಮೆ ಮಾಡಿ ನಿಖರವಾದ ಬಂಗಾರದ ತೂಕ, ಮೊತ್ತ ಕಂಡು ಕೊಂಡಿದ್ದೇನೆ.

**<u>ಮರು ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ</u>**

**ಅಂದು ಮುತ್ತು, ಹವಳ, ಹರಳುಗಳನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ, ಆ ರೀತಿ ಮಾಡಲು ಬರುವುದಿಲ್ಲ. ಆದರೆ ಮುತ್ತು, ಹವಳ, ಹರಳು ಎಷ್ಟು ಇವೆ ಅಂತ ಕಂಡು ಕೊಂಡು ಅವುಗಳ ಅಂದಾಜು ತೂಕ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ಮುತ್ತು, ಹವಳ, ಹರಳುಗಳ ತೂಕ ನಿಖರವಾಗಿ ಹೇಳಲು ಬರುವುದಿಲ್ಲ. ಆ ರೀತಿ ನಾನು ಮಹಜರ್‌ನಲ್ಲಿ ಕೂಡ ನಾನು ಹೇಳಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**

**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆಃ 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | **ನರಸಿಂಹಪ್ಪ** | **ಪಿಡಬ್ಲ್ಯೂ.01** |
| **ತಂದೆಯ ಹೆಸರು** | ಃ | **ನಾರಾಯಣಪ್ಪ** | **ಸಿಡಬ್ಲ್ಯೂ.02** |
| **ವಯಸ್ಸು** | ಃ | **47 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | ಃ | **ಕಛೇರಿ ಅಧೀಕ್ಷಕರು, ಡಿಡಿಎಲ್ಆರ್ ಕಛೇರಿ, ಚಿತ್ರದುರ್ಗ** | **ದಿನಾಂಕಃ 17.10.2017** |
| **ವಾಸಸ್ಥಳ** | ಃ | **ಚಿತ್ರದುರ್ಗ** | |

**<u>ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ</u>**

ಆರೋಪಿ-1 ರಾಜಣ್ಣ, ಆರೋಪಿ-2 ರಾಜೇಶ್ವರಿ ನನಗೆ ಗೊತ್ತಿರುತ್ತಾರೆ. ಆರೋಪಿ-1 ರಾಜಣ್ಣ 2014 ರಲ್ಲಿ ಚಿತ್ರದುರ್ಗದಲ್ಲಿ ಲೇಬರ್ ಇನ್ಸ್‌ಪೆಕ್ಟರ್ ಆಗಿದ್ದರು. ಆರೋಪಿ-2 ರಾಜೇಶ್ವರಿ ಇವರು ಆರೋಪಿ-1 ಇವರಿಗೆ ಹೆಂಡತಿಯಾಗಬೇಕು. ಅವಳೂ ಕೂಡ 2014 ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮೇಲ್ವಿಚಾರಕರಾಗಿದ್ದರು. ದಿಃ 03.06.2014 ರಂದು ಮೇಲಾಧಿಕಾರಿಗಳ ನಿರ್ದೇಶನದ ಪ್ರಕಾರ ನಾನು, ಸಿಡಬ್ಲ್ಯೂ-3 ಲೀಲಾವತಿ ಕೂಡಿಕೊಂಡು ಚಿತ್ರದುರ್ಗ ಲೋ.ಕಛೇರಿಗೆ ಹೋಗಿದ್ದೆವು. ಅಲ್ಲಿ ಸಿಡಬ್ಲ್ಯೂ-72 ಸತ್ಯನಾರಾಯಣ, ಇನ್ಸ್‌ಪೆಕ್ಟರ್ ಇವರನ್ನು ಭೇಟಿಯಾದೆವು. ಸದರಿಯವರು ನಮ್ಮನ್ನು ಪರಿಚಯ ಮಾಡಿಕೊಂಡು, ನಾಳೆ ಬೆಳಿಗ್ಗೆ 5.15 ಗಂಟೆಗೆ ಲೋಕಾಯುಕ್ತ ಕಛೇರಿಗೆ ಬನ್ನಿ, ಒಂದು ಕಡೆ ರೈಡ್ ಮಾಡಲು ಹೋಗುವುದಿದೆ ಅಂತ ಸಂಕ್ಷಿಪ್ತ ವಿವರ ಕೊಟ್ಟರು.

2. ಆ ಪ್ರಕಾರ ದಿಃ 04.06.2014 ರಂದು ನಾನು ಲೋ.ಕಛೇರಿಗೆ ಬೆಳಿಗ್ಗೆ 5.15 ಗಂಟೆಗೆ ಹೋದೆನು. ಅದೇ ರೀತಿ ನನ್ನ ಹಾಗೆ ಸಿಡಬ್ಲ್ಯೂ-3 ಲೀಲಾವತಿ ಕೂಡ ಪಂಚರಾಗಿ ಲೋ.ಕಛೇರಿಗೆ ಬಂದರು. ಆಗ ಸಿಡಬ್ಲ್ಯೂ-72

ಸತ್ಯನಾರಾಯಣ, ಸಿ.ಪಿ.ಐ., ಇವರು ನಮಗೆ ಸಿಕ್ಕರು. ಸದರಿಯವರು ರಾಜಣ್ಣ, ಲೇಬರ್ ಇನ್ಸ್‌ಪೆಕ್ಟರ್, ಚಿತ್ರದುರ್ಗ ಇವರ ಮನೆಗೆ ರೇಡ್ ಮಾಡಲು ಹೋಗುವುದಿದೆ, ನೀವು ಪಂಚರಾಗಿ ಸಹಕರಿಸಿರಿ ಎಂದು ಹೇಳಿದರು. ಅದಕ್ಕೆ ನಾನು, ಸಿಡಬ್ಲ್ಯೂ-3 ಲೀಲಾವತಿ ಒಪ್ಪಿಕೊಂಡೆವು. ಆ ಪ್ರಕಾರ ಅಂದು ನಾನು, ಸಿಡಬ್ಲ್ಯೂ-72 ಸತ್ಯನಾರಾಯಣ, ಸಿಡಬ್ಲ್ಯೂ-3 ಲೀಲಾವತಿ, ಸಿಡಬ್ಲ್ಯೂ-4 ಚಂದ್ರಶೇಖರ, ಅಕ್ಕಸಾಲಿಗ, ಸಿಡಬ್ಯೂ-5 ಎಂ.ಡಿ.ಮಹಮದ್ ಅಸ್ಲಾಂ, ಕಾರ್ಪೆಂಟರ್, ಪೊಲೀಸ್ ಸಿಬ್ಬಂದಿ ಕೂಡಿಕೊಂಡು ಆರೋಪಿತರು ವಾಸವಾಗಿರುವ ಚಿತ್ರದುರ್ಗ ಪಟ್ಟಣದ 5ನೇ ಬ್ಲಾಕ್ ಯಂಗಮ್ಮನಕಟ್ಟೆ ಮನೆಯ ಹತ್ತಿರ ಹೋದೆವು.

3. ಅಲ್ಲಿ ಆರೋಪಿತರ ಮನೆಯ ಹತ್ತಿರ ಹೋಗಿ ಕಾಲಿಂಗ್ ಬೆಲ್ ಮಾಡಿದಾಗ ಒಬ್ಬ ವ್ಯಕ್ತಿ ಬಂದನು, ಆಗ ಸಿಡಬ್ಲ್ಯೂ-72 ಸತ್ಯನಾರಾಯಣ ಇವರು ನಾವು ಲೋ.ಪೊಲೀಸರು, ರೇಡ್ ಮಾಡಲು ಬಂದಿದ್ದೇವೆ ಅಂತ ಹೇಳಿ ಸರ್ಚ್ ವಾರೆಂಟ್ ತೋರಿಸಿದರು. ಸದರಿ ವ್ಯಕ್ತಿಯ ಹೆಸರು ಡಿ.ರಾಜಣ್ಣ ಎಂದು ಗೊತ್ತಾಯಿತು. ಅವನೇ ಆರೋಪಿ-1 ರಾಜಣ್ಣ ಆಗಿರುತ್ತಾನೆ. ಸರ್ಚ್ ವಾರೆಂಟ್‌ನ್ನು ರಾಜಣ್ಣನಿಗೆ ಕೊಟ್ಟು ಸಹಿ ತೆಗೆದುಕೊಂಡರು. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಂತರ ನಾವು ಅಂಗಶೋಧನೆ ಮಾಡಿಕೊಂಡು ಆರೋಪಿತರ ಮನೆಯ ಕಾಂಪೌಂಡ್‌ನಲ್ಲಿ ಚೆಕ್ ಮಾಡಲಾಗಿ ಅಲ್ಲಿ ಒಂದು ಬೋರ್‌ವೆಲ್ ಇತ್ತು, ಕಾರ್ ಇತ್ತು, ಮೋಟರ್‌ಸೈಕಲ್ ಇತ್ತು. ಅವುಗಳನ್ನು ಪರಿಶೀಲನೆ ಮಾಡಿ, ಅವುಗಳ ಮೌಲ್ಯವನ್ನು ರಾಜಣ್ಣ ಹೇಳಿದ ಹಾಗೆ ಮಹಜರ್‌ನಲ್ಲಿ ಬರೆಯಲಾಯಿತು. ಅದೇ ರೀತಿ ನಾವು ಅಂಗಶೋಧನೆ ಮಾಡಿದ ಮೇಲೆ ಆರೋಪಿತರ ಮನೆಯ ಒಳಗಡೆ ಹೋಗಿ ಎಲ್ಲಾ ರೂಂ, ಹಾಲ್, ಅಡುಗೆ ಮನೆ, ದೇವರ ಮನೆ ಇತ್ಯಾದಿ ಚೆಕ್ ಮಾಡಲಾಗಿ ಅಲ್ಲಿ ಬೆಡ್ ರೂಂನಲ್ಲಿ ಬಂಗಾರ, ಬೆಳ್ಳಿ, ಹಣ ಇದ್ದವು. ಅವುಗಳಲ್ಲಿ ಬಂಗಾರದ

ಆಭರಣಗಳ ಬಗ್ಗೆ ಮಹಜರ್‌ನಲ್ಲಿ ಕ್ರಮ ಸಂಖ್ಯೆ 187 ರಿಂದ 200ರವರೆಗೆ ನಮೂದು ಮಾಡಿ ಅವುಗಳ ವಿವರ, ಬೆಲೆ ಬರೆಯಲಾಗಿದೆ. ಅದೇ ರೀತಿ ಬೆಳ್ಳಿಯ ವಸ್ತುಗಳನ್ನು ಕ್ರಮ ಸಂಖ್ಯೆ 201 ರಿಂದ 214 ರವರೆಗೆ ಮಹಜರ್‌ನಲ್ಲಿ ಬರೆಯಲಾಗಿದೆ. ಅದೇ ರೀತಿ ಆರೋಪಿತರ ಮನೆಯಲ್ಲಿ ದೊರೆತಂತಹ ರೂ.1,35,735/- ಇತ್ತು. ಅದನ್ನು ಕ್ರ.ಸಂ.215 ಅಂತ ಮಹಜರ್‌ನಲ್ಲಿ ತೋರಿಸಲಾಗಿದೆ. ಅಂದು ಲೋ.ಪೊಲೀಸರು ಆರೋಪಿತರ ಮನೆಯಲ್ಲಿ ದೊರೆತಂತಹ ಬೆಳ್ಳಿ, ಬಂಗಾರ ಹಾಗೂ ದೊರೆತಂತಹ ಹಣವನ್ನು ಆರೋಪಿತರ ಕಡೆಯಿಂದ ಸ್ಟಾಂಪ್ ಪೇಪರ್ ಮೇಲೆ ಪ್ರಮಾಣ ಪತ್ರ ಪಡೆದುಕೊಂಡು, ಸಹಿ ತೆಗೆದುಕೊಂಡು ಆರೋಪಿತರಿಗೆ ಮರಳಿ ಕೊಟ್ಟರುತ್ತಾರೆ.

4. ಈಗ ತೋರಿಸಿದ ಮಹಜರ್ ನೋಡುತ್ತಿದ್ದೇನೆ, ಅದರ ಮೇಲೆ ನನ್ನ ಸಹಿ ಇದೆ. ಮಹಜರನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-2 ಮಹಜರ್‌ಗೆ ಸಿಡಬ್ಲ್ಯೂ-3 ಲೀಲಾವತಿ, ಬೆರಳಚ್ಚು ಮಾಡಿದ ತಿಪ್ಪೇಸ್ವಾಮಿ, ಬಂಗಾರವನ್ನು ತೂಕ ಮಾಡಿದ ಚಂದ್ರಶೇಖರ ಸಹಿ ಮಾಡಿದ್ದಾರೆ. ಈಗ ತೋರಿಸಿದ ಆರೋಪಿ-1 ರಾಜಣ್ಣ ಬರೆದುಕೊಟ್ಟಂತಹ ಪ್ರಮಾಣ ಪತ್ರ ನೋಡುತ್ತಿದ್ದೇನೆ, ಅದೇ ಆಗಿರುತ್ತದೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರ ಮನೆಯ ಬೆಡ್‌ರೂಂನಲ್ಲಿ ಆರೋಪಿತರರಿಗೆ ಸಂಬಂಧಿಸಿದ ಇನ್ಸುರೆನ್ಸ್ ದಾಖಲೆ, ವೆಹಿಕಲ್ ದಾಖಲೆ, ಮನೆ ಆಸ್ತಿ ದಾಖಲೆ, ಬ್ಯಾಂಕ್ ಪಾಸ್‌ಬುಕ್ ಇತ್ಯಾದಿ ದಾಖಲೆ ಇದ್ದವು. ಅವುಗಳನ್ನು ಲೋ.ಪೊಲೀಸರು ಅಮಾನತು ಪಡಿಸಿಕೊಂಡು ನಿಪಿ-2 ಮಹಜರ್‌ನ ಕ್ರ.ಸಂ.216 ರಿಂದ 289 ಅಂತ ಬರೆದು ನಮೂದಿಸಲಾಗಿದೆ. ಅದೇ ರೀತಿ ಆರೋಪಿತರ ಮನೆಯ ಒಂದನೇ ಮಹಡಿಯಲ್ಲಿ ಕೆಲವು ಗೃಹ ಬಳಕೆ ವಸ್ತುಗಳು ಇದ್ದವು. ಅವುಗಳನ್ನು ಕೂಡ ನಿಪಿ-2 ಮಹಜರ್‌ನಲ್ಲಿ ಬರೆಯಲಾಗಿದೆ.

ಆರೋಪಿತರು ವಾಸವಾಗಿರುವ ಮನೆಯ ಖಾತಾ ನಂ.10888 ಅಸೆಸ್‌ಮೆಂಟ್ ನಂ.18673/1 ಇದ್ದು, ಅದರ ಮೌಲ್ಯ 2014 ರಲ್ಲಿ ಅಂದಾಜು ರೂ.1,00,00,000/- (ಒಂದು ಕೋಟ ರೂ.) ಅಂತ ನಿಗದಿ ಮಾಡಿ ನಿಪಿ-2 ಮಹಜರ್‌ನಲ್ಲಿ ಬರೆದಿದ್ದಾರೆ.

**<u>ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ</u>**

5. ನಾನು ಇಂಜಿನಿಯರ್ ಆಗಿರುವುದಿಲ್ಲ. ನಾನು ಎಂ.ಎ. ಪದವೀಧರ. ಆರೋಪಿತರ ಮನೆಯ ಬೆಲೆ 2014ಕ್ಕೆ ರೂ. 1 ಕೋಟ ಅಂತ ಅಂದಾಜು ಮೇರೆಗೆ ಹೇಳಿದ್ದೇನೆ. ನಾನು ತಾಂತ್ರಿಕ ಪರಿಣಿತಿ ಹೊಂದಿರುವುದಿಲ್ಲ. ಕಟ್ಟಡದ ಮೌಲ್ಯ ಕಂಡು ಹಿಡಿಯಲು ನಾನು ತಾಂತ್ರಿಕ ತರಬೇತಿ ಪಡೆದಿರುವುದಿಲ್ಲ. ಅಂದು ನಾವು ಆರೋಪಿತರ ಮನೆಗೆ ಹೋದಾಗ ನಾವು ಮತ್ತು ಲೋ.ಪೊಲೀಸರು ಆ ಕಟ್ಟಡದ ಯಾವುದಾದರೂ ಭಾಗದಲ್ಲಿ ಹೊಡೆದು, ಕೊರೆದು ಅದರ ಶಕ್ತಿ ಸಾಮರ್ಥ್ಯವನ್ನು ಕಂಡು ಕೊಂಡಿರುವುದಿಲ್ಲ. ಅಂದು ಮನೆಯಲ್ಲಿ ದೊರೆತಂತಹ ಬೆಳ್ಳಿ, ಬಂಗಾರ ಇತರೆ ವಸ್ತುಗಳ ಬೆಲೆಗಳನ್ನು ನಾವು ಹೇಳಿರುವುದಿಲ್ಲ. ಅವುಗಳ ಬೆಲೆಯನ್ನು ಆರೋಪಿ ರಾಜಣ್ಣ ಹೇಳಿರುತ್ತಾನೆ. ಅಂದು ಬೆಳ್ಳಿ, ಬಂಗಾರದ ಬೆಲೆಯನ್ನು ಆರೋಪಿತರು ನಮಗೆ ಹೇಳಿಲ್ಲ ಎನ್ನುವುದು ಸುಳ್ಳು. ಲೋ.ಪೊಲೀಸರು ತಮಗೆ ಅನುಕೂಲವಾಗುವ ರೀತಿಯಲ್ಲಿ ನಿಪಿ-2 ಮಹಜರ್ ಮಾಡಿದ್ದಾರೆ ಎನ್ನುವುದು ಸರಿಯಲ್ಲ.

6. ಅಂದು ಜಪ್ತಿ ಮಾಡಿದ ಬೆಳ್ಳಿ, ಬಂಗಾರದಲ್ಲಿ ಕೆಲವು ವಸ್ತುಗಳನ್ನು ಆರೋಪಿ-2 ರಾಜೇಶ್ವರಿ ತನ್ನ ತಮರುಮನೆಯಿಂದ ತಂದಿದ್ದಳು ಎಂದರೆ ಇರಬಹುದು. ಅದೇ ರೀತಿ ಆರೋಪಿ-1 ರಾಜಣ್ಣ ಇವರಿಗೆ ತಂದೆ ತಾಯಿ ಕಡೆಯಿಂದ ಕೆಲವು ಬೆಳ್ಳಿ ಬಂಗಾರದ ವಸ್ತುಗಳು ಬಂದಿದ್ದವು ಎನ್ನುವುದು ನನಗೆ

**ಗೊತ್ತಿಲ್ಲ. ನಿಪಿ-2 ಮಹಜರ್ ಬರೆಯಲು ನಾನು ವೈಯಕ್ತಿಕವಾಗಿ ಮಾಹಿತಿ ಕೊಟ್ಟಿಲ್ಲ.**

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.**